# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ದೂರವಾಣಿ ಸಂಖ್ಯೆ 080 22212343
ಫ್ಯಾಕ್ಸ್ ಸಂಖ್ಯೆ 080 22278803
ವೆಬ್‌ಸೈಟ್ kptcl.karnataka.gov.in

ನಿಗಮ ಕಾರ್ಯಾಲಯ,
ಕಾವೇರಿ ಭವನ,
ಬೆಂಗಳೂರು 560 009

CIN No. U40109KA1999SGC025521

ಸಂಖ್ಯೆ: ಕವಿಪ್ರನಿನಿ/ಬಿ57/23110/2021-22 ದಿನಾಂಕ: 14 JAN 2022

## ಸುತ್ತೋಲೆ

ವಿಷಯ: ಅಧಿಕಾರಿಗಳು/ನೌಕರರು ವರ್ಗಾವಣೆಗಳಗಾಗಿ/ನಿಯೋಜನೆಗಳಗಾಗಿ ಶಿಫಾರಸ್ಸುಗಳನ್ನು ತರುತ್ತಿರುವ ಬಗ್ಗೆ

ಉಲ್ಲೇಖ:
1. ನಿಗಮದ ಸುತ್ತೋಲೆ ಸಂಖ್ಯೆ: ಕವಿಮಂ/ಎಸ್‌ಎ3.251/90-91 ದಿನಾಂಕ 11.09.91
2. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿಲಎ/ಎಸ್‌ಎ3/5474/97-98/2 ದಿನಾಂಕ 20.01.2020
3. ಆಪ್ತ ಕಾರ್ಯದರ್ಶಿ, ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ರವರ ಟಿಪ್ಪಣಿ ಸಂಖ್ಯೆ: ಇಕ&ಸಸ/ಆಕಾ/ಟಿ/604/ 2021 ದಿನಾಂಕ 05.01.2022.

--

ಇತ್ತೀಚಿನ ದಿನಗಳಲ್ಲಿ ನಿಗಮದ ಅಧಿಕಾರಿಗಳು/ನೌಕರರು ವರ್ಗಾವಣೆಗಳಗಾಗಿ/ ನಿಯೋಜನೆಗಾಗಿ/ಪದೋನ್ನತಿಯ ಮೇಲಿನ ಸ್ಥಳನಿಯುಕ್ತಿಗಾಗಿ ಸಮುಚಿತ ಮಾರ್ಗದ ಮುಖೇನ ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ಮನವಿ ಪತ್ರಗಳನ್ನು ಸಲ್ಲಿಸದೇ, ನೇರವಾಗಿ ಸನ್ಮಾನ್ಯ ಮುಖ್ಯಮಂತ್ರಿಯವರ ಕಛೇರಿಗೆ, ಮಾನ್ಯ ಸಚಿವರುಗಳಿಗೆ ಮನವಿ ಪತ್ರಗಳನ್ನು ಸಲ್ಲಿಸುತ್ತಿರುವುದು ಕಂಡುಬಂದಿರುತ್ತದೆ. ಈ ರೀತಿಯ ಕ್ರಮಗಳಿಂದ ಶಿಸ್ತಿಗೆ ಮತ್ತು ನಿಗಮದ ಕೆಲಸಗಳಿಗೆ ಧಕ್ಕೆಯಾಗುತ್ತಿರುವುದು ವಿಷಾದನೀಯ ಸಂಗತಿಯಾಗಿದ್ದು, ಕವಿಪ್ರನಿನಿ ನೌಕರರ ಸೇವಾ (ನಡತೆ) ನಿಬಂಧನೆಗಳು 1988 ರ ನಿಯಮಾವಳಿ 18(1) ರ ಕಡೆಗೆ ನಿಗಮದ ಅಧಿಕಾರಿ/ನೌಕರರ ಗಮನವನ್ನು ಸೆಳೆಯುತ್ತಾ, ವರ್ಗಾವಣೆಗಳಗಾಗಿ/ನಿಯೋಜನೆಗಾಗಿ/ ಪದೋನ್ನತಿಯ ಮೇಲಿನ ಸ್ಥಳನಿಯುಕ್ತಿಗಾಗಿ ಸೂಕ್ತ ಪಥದ ಮೂಲಕ ಅರ್ಜಿಯನ್ನು ಸಲ್ಲಿಸುವುದನ್ನು ಹೊರತುಪಡಿಸಿ, ಇನ್ಯಾವುದೇ ರೀತ್ಯ ಅರ್ಜಿಗಳನ್ನು ಸಲ್ಲಿಸುವ ಅಧಿಕಾರಿ/ನೌಕರರ ಕ್ರಮವು ದುರ್ನನತೆಯಾಗಿದ್ದು, ಅವರುಗಳು ವಿರುದ್ಧ ವರ್ಗೀಕರಣ, ಶಿಸ್ತು, ನಿಯಂತ್ರಣ ಮತ್ತು ಮೇಲ್ಮನವಿ ನಿಯಮಾವಳಗಳು 1987 ರ ಅನ್ವಯ ಸೂಕ್ತ ಶಿಸ್ತು ಕ್ರಮಗಳನ್ನು ಜರುಗಿಸಬಹುದಾಗಿದೆ.

ಆದ್ದರಿಂದ, ಅಧಿಕಾರಿಗಳು ಮತ್ತು ನೌಕರರು ವರ್ಗಾವಣೆಗಳಗಾಗಿ/ನಿಯೋಜನೆಗಾಗಿ/ ಪದೋನ್ನತಿಯ ಮೇಲಿನ ಸ್ಥಳನಿಯುಕ್ತಿಗಾಗಿ ಸಮುಚಿತ ಮಾರ್ಗದ ಮುಖೇನ ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ಮನವಿ ಪತ್ರಗಳನ್ನು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ, ನಿಯಮಾನುಸಾರ ಸೂಕ್ತ ಶಿಸ್ತು ಕ್ರಮಗಳನ್ನು ಜರುಗಿಸಲಾಗುವುದು ಎಂದು ಈ ಮೂಲಕ ನಿಗಮದ ಎಲ್ಲಾ ಅಧಿಕಾರಿ/ನೌಕರರುಗಳಿಗೆ ಸೂಚಿಸಿದೆ.

ವ್ಯವಸ್ಥಾಪಕ ನಿರ್ದೇಶಕರು
ಅವರಿಂದ ಅನುಮೋದಿಸಲ್ಪಟ್ಟಿದೆ.

ನಿರ್ದೇಶಕರು (ಆಡಳಿತ ಮತ್ತು ಮಾ.ಸಂ)
ಕವಿಪ್ರನಿನಿ

ಪ್ರತಿಗಳು:

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ವಿದ್ಯುತ್ ಸರಬರಾಜು ಕಂಪನಿಗಳು/ಪಿಸಿಕೆಎಲ್

2. ಎಲ್ಲಾ ಮುಖ್ಯ ಇಂಜಿನಿಯರ್ (ವಿದ್ಯುತ್), ಕವಿಪ್ರನಿನಿ/ ವಿದ್ಯುತ್ ಸರಬರಾಜು ಕಂಪನಿಗಳು
3. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿದ್ಯುತ್), ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳು
4. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್) ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳು
5. ಪ್ರತಿ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ kptcl.karnataka.gov.in-->eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.